

# ಮಗುವಿನ ಲೈಂಗಿಕ ದುರುಪಯೋಗ ಮತ್ತು ಮಗುವಿನ ಸುರಕ್ಷತೆಯ ಮಾಹಿತಿ

Published By

Anyay Rahit Zindagi

Supported By

WeWorld

**Published by**

ARZ

Flat No.4, 1st Floor, Our Lady of Guia Building,

Vasco da Gama, Goa - 403802 (INDIA)

Tel: +91-832-2501416 (Office)

arzindia@gmail.com

www.arzindia.org

www.stoptrafficking.in

**Supported By**

We World

*Illustrations by* 'Fabian Gonsalves'

*Illustrations by* 'Eliette Guyot'

© ARZ, 2018

This publication may not be reproduced, modified, transmitted
in any form or any means, electronic, photocopying or otherwise,
without the consent of the publisher of this book.

# ಮಗುವಿನ ಲೈಂಗಿಕ ದುರುಪಯೋಗ ಮತ್ತು ಮಗುವಿನ ಸುರಕ್ಷತೆಯ ಮಾಹಿತಿ

Published By

ARZ
Anyay Rahit Zindagi

Supported By

We World


# ಮಗು ಎಂದರೆ ಯಾರು?

➤ ಭಾರತದ ಕಾಯ್ದೆಯ ಪ್ರಕಾರ ಮಗುವೆಂದರೆ 0–18 ವರ್ಷದೊಳಗಿನ ವ್ಯಕ್ತಿ

➤ ಇದು ಹುಡುಗ ಮತ್ತು ಹುಡುಗಿ ಇಬ್ಬರಿಗೂ ಅನ್ವಯಿಸುತ್ತದೆ

# ಮಗು ಎಂದರೆ ಯಾರು?

0–6 ವರ್ಷ?   0–21 ವರ್ಷ?   0–18 ವರ್ಷ?   14 ವರ್ಷ?



# ಮಗುವಿನ ಖಾಸಗಿ ಅಂಗಗಳು ಯಾವುವು?

- ಹುಡುಗನ ಖಾಸಗಿ ಅಂಗಗಳು ಶಿಶ್ನ ಮತ್ತು ಕುಂಡಿ
- ಹುಡುಗಿಯ ಖಾಸಗಿ ಅಂಗಗಳು, ಯೋನಿ, ಕುಂಡಿ ಮತ್ತು ಮೊಲೆ
- ಖಾಸಗಿ ಅಂಗಗಳು ಪ್ರದರ್ಶನಕ್ಕಲ್ಲ
- ನಮ್ಮ ಖಾಸಗಿ ಅಂಗಗಳಿಗೆ ಯಾರೂ ಏನನ್ನೂ ಮಾಡಲು ಬಿಡಬಾರದು
- ನಾವು ಇತರರ ಖಾಸಗಿ ಅಂಗಗಳಿಗೆ ಏನನ್ನೂ ಮಾಡಬಾದರು



ಮಗುವಿನ ಖಾಸಗಿ ಅಂಗಗಳು ಯಾವುವು?

# ಮಗುವಿನ ಲೈಂಗಿಕ ದುರುಪಯೋಗ ಎಂದರೇನು?

➤ ಮಗುವಿನ ಲೈಂಗಿಕ ದುರುಪಯೋಗವು ಒಂದು ವಿಧದ ದುರುಪಯೋಗವಾಗಿದ್ದು ಅದರಲ್ಲಿ ವ್ಯಕ್ತಿಯು ಮಗುವನ್ನು ಲೈಂಗಿಕ ಉದ್ದೇಶಕ್ಕಾಗಿ ಬಳಸುತ್ತಾನೆ.

➤ ಮಗುವಿನ ಲೈಂಗಿಕ ದುರುಪಯೋಗವು ಮನೆ, ರಸ್ತೆ, ಶಾಲೆ, ಕೆಲಸದ ಸ್ಥಳ ಇತ್ಯಾದಿಗಳು ಸೇರಿದಂತೆ ಹಲವಾರು ಸ್ಥಳಗಳಲ್ಲಿ ನಡೆಯಬಹುದು.

➤ ಮಗುವನ್ನು ಲೈಂಗಿಕವಾಗಿ ದುರುಪಯೋಗ ಪಡಿಸುವವರು ಮಗುವಿಗೆ ಪರಿಚಿತರಷ್ಟೆ ಅಲ್ಲದೆ ಅಪರಿಚಿತರೂ ಆಗಿರಬಹುದು.

➤ ಮಗುವಿನ ಲೈಂಗಿಕ ದುರುಪಯೋಗ ಪಡಿಸುವವರು ಪುರುಷರು ಅಥವಾ ಮಹಿಳೆಯರು ಆಗಿರಬಹುದು.

## ಮಗುವಿನ ಲೈಂಗಿಕ ದುರುಪಯೋಗ ಮೂರು ವಿಧದಲ್ಲಿ ಆಗಬಹುದು (ಪೋಕ್ಸೋ ಕಾಯ್ದೆ 2012ರಂತೆ)

➤ ಲೈಂಗಿಕ ಶೋಷಣೆ

➤ ಲೈಂಗಿಕ ಹಲ್ಲೆ

➤ ಭೇದಕ ಲೈಂಗಿಕ ಹಲ್ಲೆ



# ಲೈಂಗಿಕ ಶೋಷಣೆಯು ಇವುಗಳನ್ನು ಒಳಗೊಂಡಿರುತ್ತದೆ

## ಚುಡಾಯಿಸುವುದು

**ವ್ಯಕ್ತಿಯು ಮಗುವಿನ ಮೇಲೆ ಲೈಂಗಿಕ ಶೋಷಣೆ ಮಾಡಿದನೆಂದರೆ ಅವನು ಲೈಂಗಿಕ ಉದ್ದೇಶದಿಂದ ಇವುಗಳನ್ನು ಮಾಡಿರಬೇಕು:**

➤ ಯಾವುದೇ ಪದ ಅಥವಾ ಶಬ್ದ ಕೇಳಲೆಂದು ಅಥವಾ ಯಾವುದೇ ಸನ್ನೆ ಅಥವಾ ವಸ್ತು ಅಥವಾ ದೇಹದ ಭಾಗವನ್ನು ಮಗು ನೋಡುವ ಉದ್ದೇಶದಿಂದ ಯಾವುದೇ ಪದ ಅಥವಾ ಯಾವುದೇ ಶಬ್ದ ಮಾಡುವುದು ಅಥವಾ ಯಾವುದೇ ಸನ್ನೆ ಮಾಡುವುದು ಅಥವಾ ಲೈಂಗಿಕಾರ್ಥದ ಯಾವುದಾದರೂ ವಸ್ತು ಅಥವಾ ದೇಹದ ಭಾಗವನ್ನು ಪ್ರದರ್ಶಿಸುವುದು.



# ಲೈಂಗಿಕ ಶೋಷಣೆಯು ಇವುಗಳನ್ನು ಒಳಗೊಂಡಿರುತ್ತದೆ

## ಮೊಬೈಲ್ ಫೋನು ಅಥವಾ ಪತ್ರಿಕೆಗಳ ಮೂಲಕ ಮಗುವಿಗೆ ಅಶ್ಲೀಲ ಚಿತ್ರಗಳನ್ನು ತೋರಿಸುವುದು

➤ ಅಥವಾ ಇನ್ಯಾವುದೇ ವ್ಯಕ್ತಿ ನೋಡುವ ಸಲುವಾಗಿ ಮಗುವನ್ನು ತನ್ನ ದೇಹ ಅಥವಾ ದೇಹದ ಯಾವುದೇ ಭಾಗವನ್ನು ತಾನು ಪ್ರದರ್ಶಿಸುವಂತೆ ಮಾಡುವುದು. ಪದೇ ಪದೇ ಅಥವಾ ನಿರಂತರವಾಗಿ ಅನುಸರಿಸುವುದು ಅಥವಾ ಗಮನಿಸುವುದು ಅಥವಾ ಮಗುವನ್ನು ನೇರವಾಗಿ ಅಥವಾ ವಿದ್ಯುನ್ಮಾನ, ಡಿಜಿಟಲ್ ಅಥವಾ ಇನ್ಯಾವುದೇ ವಿಧಾನದ ಮೂಲಕ ಸಂಪರ್ಕಿಸುವುದು..



# ಲೈಂಗಿಕ ಶೋಷಣೆಯು ಇವುಗಳನ್ನು ಒಳಗೊಂಡಿರುತ್ತದೆ

## ಮೊಬೈಲ್ ಫೋನು ಅಥವಾ ಪತ್ರಿಕೆಗಳ ಮೂಲಕ ಮಗುವಿಗೆ ಅಶ್ಲೀಲ ಚಿತ್ರಗಳನ್ನು ತೋರಿಸುವುದು

- ಅಶ್ಲೀಲ ಉದ್ದೇಶದಿಂದ ಮಗುವಿಗೆ ಯಾವುದೇ ವಸ್ತು ಅಥವಾ ಚಿತ್ರವನ್ನು ಯಾವುದೇ ರೂಪದಲ್ಲಿ ಅಥವಾ ಮಾಧ್ಯಮದ ಮೂಲಕ ತೋರಿಸುವುದು.
- ಯಾವುದೇ ವಿಧದ ಮಾಧ್ಯಮದ ಮೂಲಕ ನಿಜವಾದ ಅಥವಾ ಕೃತಕವಾಗಿ ಸೃಷ್ಟಿಸಿದ ಲೈಂಗಿಕ ಕೃತ್ಯಗಳನ್ನು ವಿದ್ಯುನ್ಮಾನ, ಚಲನಚಿತ್ರ ಅಥವಾ ಡಿಜಿಟಲ್ ಅಥವಾ ಇನ್ನಿತರ ವಿಧಾನಗಳ ಮೂಲಕ ತೋರಿಸಿ ಬಳಸಲು ಹೆದರಿಸುವುದು ಮತ್ತು ಮಗುವಿನ ದೇಹದ ಯಾವುದೇ ಭಾಗ ಅಥವಾ ಮಗುವನ್ನು ಲೈಂಗಿಕ ಕೃತ್ಯಗಳಿಗೆ ಬಳಸುವುದು.
- ಅಶ್ಲೀಲ ಚಿತ್ರಣದ ಉದ್ದೇಶಕ್ಕಾಗಿ ಮಗುವನ್ನು ಪುಸಲಾಯಿಸುವುದು.



# ಲೈಂಗಿಕ ಹಲ್ಲೆಯು ಇವುಗಳನ್ನು ಒಳಗೊಂಡಿರುತ್ತದೆ

## ಮಗುವನ್ನು ಅಸಭ್ಯವಾಗಿ ಮುಟ್ಟುವುದು

ಪುರುಷ ಅಥವಾ ಮಹಿಳೆ ಯಾರಾದರೂ ಲೈಂಗಿಕ ಅಂಗದೊಳಗೆ ತಮ್ಮ ಅಂಗಗಳನ್ನು ತೂರಿಸದಿದ್ದರೂ, ಲೈಂಗಿಕ ಉದ್ದೇಶದಿಂದ ಮಗುವಿನ ದೇಹವನ್ನು ಸ್ಪರ್ಶಿಸಿದರೆ ಅದನ್ನು ಲೈಂಗಿಕ ಹಲ್ಲೆ ಎನ್ನಲಾಗುತ್ತದೆ.

ಲೈಂಗಿಕ ಉದ್ದೇಶದಿಂದ ವ್ಯಕ್ತಿಯು ಮಗುವಿನ ಯೋನಿ, ಶಿಶ್ನ, ಕುಂಡಿ ಅಥವಾ ಮೊಲೆಗಳನ್ನು ಮುಟ್ಟಿದರೆ ವ್ಯಕ್ತಿಯು ಲೈಂಗಿಕ ಹಲ್ಲೆ ಮಾಡಿದಂತಾಗುತ್ತದೆ.

## ಹಿರಿಯರನ್ನು ಮಗುವು ಅಸಭ್ಯವಾಗಿ ಮುಟ್ಟುವಂತೆ ಮಾಡುವುದು


ಯಾವುದೇ ವ್ಯಕ್ತಿಯು ಮಗುವು ತನ್ನ ಅಥವಾ ಯಾವುದೇ ಇತರ ವ್ಯಕ್ತಿಯ ಯೋನಿ, ಶಿಶ್ನ, ಕುಂಡಿ ಆಥವಾ ಮೊಲೆಯನ್ನು ಮುಟ್ಟುವಂತೆ ಮಾಡಿದರೆ ವ್ಯಕ್ತಿಯು ಲೈಂಗಿಕ ಹಲ್ಲೆ ಮಾಡಿದಂತಾಗುತ್ತದೆ.


TICKETS



## ‘ಭೇದಕ / ಹಠ ಸಂಭೋಗ ಲೈಂಗಿಕ ಆಕ್ರಮಣ

ಯಾವುದಾದರೂ ವ್ಯಕ್ತಿ ಈ ಮುಂದಿನಂತಹವುಗಳನ್ನು ಮಾಡಿದ್ದಲ್ಲಿ ಅದನ್ನು ‘ಭೇದಕ / ಹಠ ಸಂಭೋಗ ಲೈಂಗಿಕ ಆಕ್ರಮಣ’ ಅಪರಾಧ ಮಾಡಿರುವುದಾಗಿ ಪರಿಗಣಿಸಲಾಗುತ್ತದೆ:ಯಾರಾದರೂ ತನ್ನ ಶಿಶ್ನವನ್ನು ಮಗುವಿನ ಯೋನಿ, ಬಾಯಿ, ಮೂತ್ರನಾಳ ಅಥವಾ ಗುದದ್ವಾರದೊಳಗೆ ಯಾವುದೇ ಹಂತದವರೆಗೆ ತೂರಿಸಿದರೆ ಅಥವಾ ಮಗುವನ್ನು ತನಗೆ ಅಥವಾ ಬೇರೆ ಯಾವುದೇ ವ್ಯಕ್ತಿಗೆ ಹಾಗೆ ಮಾಡಲು ಹೇಳಿದರೆ; ಅಥವಾ ಯಾರಾದರೂ ಶಿಶ್ನವಲ್ಲದ  ಯಾವುದೇ ವಸ್ತು ಅಥವಾ ದೇಹದ ಯಾವುದೇ ಭಾಗವನ್ನು ಮಗುವಿನ ಯೋನಿ, ಬಾಯಿ, ಮೂತ್ರನಾಳ ಅಥವಾ ಗುದದ್ವಾರದೊಳಗೆ ಯಾವುದೇ ಹಂತದವರೆಗೆ ತೂರಿಸಿದರೆ ಅಥವಾ ಮಗುವಿನಿಂದ ತನಗೆ ಅಥವಾ ಬೇರೆ ಯಾವುದೇ ವ್ಯಕ್ತಿಗೆ ಹಾಗೆ ಮಾಡಿಸಿದರೆ; ಅಥವಾ ಯಾರಾದರೂ ಮಗುವಿನ ಶಿಶ್ನ, ಯೋನಿ, ಗುದದ್ವಾರ, ಮೂತ್ರನಾಳಕ್ಕೆ ಬಾಯಿ ಹಾಕಿದರೆ ಅಥವಾ ತನಗೆ ಅಥವಾ ಬೇರೆ ಯಾವುದೇ ವ್ಯಕ್ತಿಗೆ ಹಾಗೆ ಮಾಡಲು ಹೇಳುವುದು.




# ಮಕ್ಕಳ ದುರುಪಯೋಗಿಗಳು ಬಳಸುವ ವಿಧಾನಗಳು

1. ದುರುಪಯೋಗ ಪಡಿಸುವವರು ಮಗುವನ್ನು ಗುರುತಿಸುತ್ತಾರೆ.

2. ಮಗುವಿನ ಜೊತೆ ಸ್ನೇಹದಿಂದ ವರ್ತಿಸುತ್ತಾರೆ.

3. ಮಗುವಿಗೆ ಹೆದರಿಕೆ ಮತ್ತು ಬೆದರಿಕೆ ಹಾಕುತ್ತಾರೆ.


4. ಮೊದಲ ಬಾರಿಗೆ ದುರುಪಯೋಗ ಪಡಿಸಿ/ಪರೀಕ್ಷಿಸಿ ನಂತರ ಪದೇ ಪದೇ ದುರುಪಯೋಗ ಮಾಡುತ್ತಾರೆ.


1
2
3
4

# ಲೈಂಗಿಕ ದುರುಪಯೋಗಕ್ಕೆ ಈಡಾಗಲು ಹೆಚ್ಚು ಸಾಧ್ಯತೆಯಿರುವ ಮಗು

ಲೈಂಗಿಕ ದುರುಪಯೋಗ ಮಗುವಿನ ಯಾವುದೇ ವಯಸ್ಸು ಮತ್ತು ಲಿಂಗಕ್ಕೆ ಆಗಬಹುದು
ಮಗು ಬಲಿಪಶುವಾಗಲು ಯಾವುದೇ ನಿರ್ಧಿಷ್ಟ ಕಾರಣಗಳಿಲ್ಲ. ಕೆಲವು ಸಾಧ್ಯತೆಗಳು ಹೀಗಿವೆ:

- ಮಾದಕ ಪದಾರ್ಥಗಳ ಚಟಗಳಿರುವ ಕುಟುಂಬಗಳ ಮಗು
- ಭಾವನಾತ್ಮಕವಾಗಿ ಸ್ಥಿಮಿತವಿಲ್ಲದ ಪೋಷಕರನ್ನು ಹೊಂದಿರುವ ಮಗು
- ಪ್ರೀತಿ ಮತ್ತು ಪೋಷಣೆಯ ಕೊರತೆಯಿರುವ ಮಗು
- ಅಕಾರ್ಯನಿರತ ಕುಟುಂಬದ ಮಗು (ಕಲಹ, ದುರ್ವರ್ತನೆ, ನಿರ್ಲಕ್ಷ್ಯ)
- ಕಡಿಮೆ ಪೋಷಕ ಮಗು ಸಂಬಂಧವಿರುವ ಮಗು
- ಸರಿಯಾಗಿ ನೋಡಿಕೊಳ್ಳದ ಮಗು
- ವಸತಿಯಿಲ್ಲದ ಮಗು




# ಎಚ್ಚರಿಕೆಯಿಂದ ಇರಬೇಕಾದ ಮಗುವಿನ ವರ್ತನೆ

- ತುಂಬಾ ಸ್ನೇಹದಿಂದಿರುವ ಮಗು ಮಾತನಾಡುವುದನ್ನು ನಿಲ್ಲಿಸುವುದು
- ಸುಮ್ಮನೆ ಕುಳಿತುಕೊಳ್ಳುವುದು ಮತ್ತು ಯಾರೊಂದಿಗೂ ಆಟವಾಡದಿರುವುದು
- ಕೆಳ ಹೊಟ್ಟೆಯಲ್ಲಿ ನೋವು ಎಂದು ದೂರುವ ಮಗು



# ಎಚ್ಚರಿಕೆಯಿಂದ ಇರಬೇಕಾದ ಮಗುವಿನ ವರ್ತನೆ

- ಹೆದರಿಕೆ
- ಮಗು ಅಪರಿಚಿತ ವ್ಯಕ್ತಿಯಿಂದ ವಿವರಿಸಲಾರದ ಉಡುಗೊರೆಗಳನ್ನು ಪಡೆಯುವುದು.
- ಮಗುವಿನ ವರ್ತನೆಯಲ್ಲಿ ಇದ್ದಕ್ಕಿದಂತೆ ಬದಲಾವಣೆಯಾಗುವುದು



# ಎಚ್ಚರಿಕೆಯಿಂದ ಇರಬೇಕಾದ ಮಗುವಿನ ವರ್ತನೆ

- ಮಗು ಪದೇ ಪದೇ ನಿಮಗೆ ಅವನು/ಅವಳು ಕೆಲವೊಂದು ಸ್ಥಳಗಳಿಗೆ ಅಥವಾ ಕೆಲವೊಂದು ವ್ಯಕ್ತಿಗಳ ಬಳಿ ಹೋಗಲು ಇಷ್ಟಪಡುವುದಿಲ್ಲ ಎಂದು ಹೇಳುವುದು
- ಮಗು ಸಿಡುಕುತನ ಮತ್ತು ಉದ್ವಿಗ್ನತೆಯನ್ನುತೋರಿಸುವುದು
- ಮಗು ಗೊಂದಲಕ್ಕೀಡಾಗುವುದು




# ಎಚ್ಚರಿಕೆಯಿಂದ ಇರಬೇಕಾದ ಮಗುವಿನ ವರ್ತನೆ?

- ಮಗು ಹಾಳಾದಂತೆ, ಮೊಂಡು ಮತ್ತು ಸೋಮಾರಿಯಾದಂತೆ ತೋರುವುದು
- ಮಗು ಆಕ್ರಮಣಶೀಲತೆಯನ್ನು ತೋರಿಸುವುದು, ವಸ್ತುಗಳನ್ನು ಮುರಿಯುವುದು, ಹಿಂಸಾತ್ಮಕವಾಗುವುದು ಮತ್ತು ಅನಿಯಂತ್ರಿತ ಕೋಪವನ್ನು ತೋರಿಸಬಹುದು.



# ಎಚ್ಚರಿಕೆಯಿಂದ ಇರಬೇಕಾದ ಮಗುವಿನ ವರ್ತನೆ?

- ಮಗು ಅಗೌರವವನ್ನು ಮತ್ತು ಸುತ್ತಲಿನ ಕೆಲವು ಜನರಲ್ಲಿ ಹತಾಶೆಯನ್ನು ತೋರಿಸುವುದು


NO

# ಮಗುವನ್ನು ಸಂಭಾಳಿಸುವುದು

- ಮಗುವನ್ನು ಗಮನಿಸಿ
- ಮಗುವಿನ ಮಾತನ್ನು ಆಲಿಸಿ
- ಮಗುವಿನೊಡನೆ ಮಾತನಾಡಿ
- ಮಗುವಿಗೆ ಅದು ಹೇಳಿದ್ದನ್ನು ನೀವು ನಂಬುತ್ತೀರಿ ಎಂಬ ನಂಬಿಕೆ ಉಂಟು ಮಾಡಿ



# ಮಗುವನ್ನು ಸಂಭಾಳಿಸುವುದು

- ಮಗುವನ್ನು ನಂಬಿ ಮತ್ತು ಆ ನಂಬಿಕೆಯನ್ನು ಅವರೊಡನೆ ಹಂಚಿಕೊಳ್ಳಿ
- ಮಗುವಿನಲ್ಲಿ ಆತ್ಮವಿಶ್ವಾಸವನ್ನು ತುಂಬಿ
- ಸ್ವಯಂಸೇವಾ ಸಂಸ್ಥೆ/ಸೇವೆಯನ್ನು ಒದಗಿಸುವವರೊಡನೆ ಸಂಪರ್ಕಿಸಿ





# ಸಂಪರ್ಕಿಸಬಹುದಾದ ಸಂಸ್ಥೆಗಳು

- ಪೊಲೀಸ್ – ಕರೆ ಸಂಖ್ಯೆ 100
- ಸ್ವಯಂಸೇವಾ ಸಂಸ್ಥೆಗಳು
- ಶಾಲೆ


NGO
SCHOOL PRINCIPAL
1098

# ಈ ಕೆಳಗಿನದನ್ನು ವ್ಯಾಖ್ಯಾನಿಸಿ

➤ 15 ವರ್ಷ ವಯೋಮಾನದ ಹುಡುಗರ ಗುಂಪು ಮಹಿಳೆಯು ಶೌಚಾಲಯದ ಒಳಗಿದ್ದಾಗ ಬಗ್ಗಿ ನೋಡುತ್ತಾರೆ
**(ಮಗುವಿನ ಲೈಂಗಿಕ ದುರುಪಯೋಗವಲ್ಲ ಆದರೆ ಲೈಂಗಿಕ ಕಿರುಕುಳ)**



# ಈ ಕೆಳಗಿನದನ್ನು ವ್ಯಾಖ್ಯಾನಿಸಿ

- ಒಬ್ಬ ಹುಡುಗ ಮತ್ತು ಹುಡುಗಿ ಯಾರಿಗೂ ತಿಳಿಸದೇ ಬೀಚಿಗೆ ಹೋಗುತ್ತಾರೆ
  **(ಮಗುವಿನ ಲೈಂಗಿಕ ದುರುಪಯೋಗವಲ್ಲ)**



# ಈ ಕೆಳಗಿನದನ್ನು ವ್ಯಾಖ್ಯಾನಿಸಿ

- 20 ವರ್ಷದ ಹುಡುಗನು 17 ವರ್ಷದ ಹುಡುಗಿಯು ಓಣಿಯಲ್ಲಿ ಹೋಗುತ್ತಿರುವಾಗ ಅವಳ ಮೊಲೆಯನ್ನು ಮುಟ್ಟುತ್ತಾನೆ
  **(ಮಗುವಿನ ಲೈಂಗಿಕ ದುರುಪಯೋಗ: ಲೈಂಗಿಕ ಹಲ್ಲೆ)**



# ಈ ಕೆಳಗಿನದನ್ನು ವ್ಯಾಖ್ಯಾನಿಸಿ

- 17 ವರ್ಷದ ಹುಡುಗ ಮತ್ತು 16 ವರ್ಷದ ಹುಡುಗಿ ಪ್ರೀತಿಸುತ್ತಿದ್ದಾರೆ ಮತ್ತು ಅವರ ಓಡಿಹೋಗುತ್ತಾರೆ
  **(ಮಗುವಿನ ಲೈಂಗಿಕ ದುರುಪಯೋಗವಲ್ಲ)**

- 17 ವರ್ಷದ ಹುಡುಗ ಮತ್ತು 16 ವರ್ಷದ ಹುಡುಗಿ ಪ್ರೀತಿಸುತ್ತಿದ್ದಾರೆ ಮತ್ತು ಅವರ ಓಡಿಹೋಗುತ್ತಾರೆ ಮತ್ತು ಪೊಲೀಸರು ಅವರನ್ನು ಹಿಡಿದಾದ ಹುಡುಗಿಯು ತಾವು ಲೈಂಗಿಕ ಸಂಬಂಧ ಹೊಂದಿರುವುದಾಗಿ ಹೇಳುತ್ತಾಳೆ
  **(ಮಗುವಿನ ಲೈಂಗಿಕ ದುರುಪಯೋಗ: ಭೇದಕ ಲೈಂಗಿಕ ಹಲ್ಲೆ)**



# ಮಿಥ್ಯ ಮತ್ತು ಸತ್ಯಗಳು

**ಮಿಥ್ಯ: ಲೈಂಗಿಕ ದುರುಪಯೋಗವು ಮಗುವಿನ ವರ್ತನೆ ಮತ್ತು ಉಡುಪಿನ ರೀತಿಯಿಂದಾಗುತ್ತದೆ.**
**ಸತ್ಯ:** ದುರುಪಯೋಗಕ್ಕೆ ಮಗುವನ್ನು ದೂಷಿಸುವಂತಿಲ್ಲ. ದುರುಪಯೋಗ ಪಡಿಸಿಕೊಂಡವರನ್ನು ದೂಷಿಸಬೇಕು ಏಕೆಂದರೆ ಅವನು/ಅವಳು ತಮ್ಮ ಬಲ, ಸ್ಥಾನವನ್ನು ಮಗುವಿನೊಂದಿಗೆ ದುರುಪಯೋಗಪಡಿಸಕೊಂಡಿದ್ದಾರೆ ಮತ್ತು ಮಗುವಿನ ನಂಬಿಕೆಯನ್ನು ಮುರಿದಿದ್ದಾರೆ.

**ಮಿಥ್ಯ: ಪರಿಚಿತ ವ್ಯಕ್ತಿಯು ಮಗುವನ್ನು ಲೈಂಗಿಕವಾಗಿ ದುರುಪಯೋಗ ಪಡಿಸುವುದಿಲ್ಲ**
**ಸತ್ಯ:** ದುರುಪಯೋಗಪಡಿಸಿಕೊಳ್ಳುವವರು ಸಾಮಾನ್ಯವಾಗಿ ಮಗುವಿಗೆ ಮತ್ತು ಕುಟುಂಬಕ್ಕೆ ಪರಿಚಿತರಿರುತ್ತಾರೆ.

**ಮಿಥ್ಯ: ಮಗುವಿನ ಲೈಂಗಿಕ ದುರುಪಯೋಗವು ಕೇವಲ ಬಡ ಮತ್ತು ವಲಸೆ ಕುಟುಂಬಗಳಲ್ಲಾಗುತ್ತದೆ.**
**ಸತ್ಯ:** ದುರುಪಯೋಗ ಪಡಿಸಿಕೊಳ್ಳುವವರು ಮಗುವನ್ನು ಅದರ ಜಾತಿ, ಪ್ರಾಂತ್ಯ, ಆರ್ಥಿಕ ಸ್ಥಿತಿಗಳ ಆಧಾರದ ಮೇಲೆ ಗುರಿಯಾಗಿಸುವುದಿಲ್ಲ.

**ಮಿಥ್ಯ: ಮಗು ದುರುಪಯೋಗವನ್ನು ಮರೆತರೆ ಉತ್ತಮ**
**ಸತ್ಯ:** ದುರುಪಯೋಗವು ಮಗುವಿನ ಭಾವನಾತ್ಮಕ ಮತ್ತು ಮಾನಸಿಕ ಅಸ್ಥಿರತೆಗೆ ಕಾರಣವಾಗುತ್ತದೆ. ಇದನ್ನು ವೃತ್ತಿಪರ ಸೇವೆ ಮತ್ತು ಪೋಷಣೆಯಿಂದ ಗುಣಪಡಿಸಬಹುದು.




# ಬಾಲ್ಯವಿವಾಹ

# ಬಾಲ್ಯವಿವಾಹ

# ಹುಡುಗ ಮತ್ತು ಹುಡುಗಿ ಮದುವೆಯಾಗಲು ಕಾನೂನಾತ್ಮಕ ವಯಸ್ಸೆಷ್ಟು?

ಹುಡುಗ– 21 ವರ್ಷ

ಹುಡುಗಿ – 18 ವರ್ಷ



## ವಿವಾಹಕ್ಕೆ ವಯಸ್ಸಿನ ನಿರ್ಬಂಧವೇಕೆ?

ಕಾಯ್ದೆಯಲ್ಲಿ ಸೂಚಿಸಿರುವ ಕಾನೂನಾತ್ಮಕ ವಯೋಮಾನಕ್ಕಿಂತ ಕಡಿಮೆ ವಯಸ್ಸಿನಲ್ಲಿ ಅವರ ದೇಹ ಮತ್ತು ಮನಸ್ಸುಗಳು ಪೂರ್ಣವಾಗಿ ಬೆಳವಣಿಗೆ ಹೊಂದದಿರುವ ಸಾಧ್ಯತೆಯಿದೆ. ಈ ವಯಸ್ಸಿನಲ್ಲಿ ಅವರಿಗೆ ವಿವೇಚನೆಯಿಂದ ಸಂಗಾತಿಯನ್ನು ಆಯ್ದುಕೊಳ್ಳಲಾಗದಿರಬಹುದು.

ವಿವಾಹವು ಯಶಸ್ವಿಯಾಗುವುದು: ಅವರು ವಿದ್ಯಾಭ್ಯಾಸ ಪೂರ್ಣಗೊಳಿಸಿದ್ದಾಗ, ಉದ್ಯೋಗ/ವೃತ್ತಿಯನ್ನು ಹೊಂದಿದ್ದು, ಆ ಮೂಲಕ ಆರ್ಥಿಕ ಸ್ವಾತಂತ್ರ್ಯವನ್ನು ಹೊಂದಿದ್ದಾಗ, ಕುಟುಂಬಕ್ಕಾಗಿ ಮನೆಯನ್ನು ಹೊಂದಲು ಸಾಧ್ಯವಾದಾಗ ಮತ್ತು ಪೋಷಕತ್ವಕ್ಕೆ ಜವಾಬ್ದಾರಿಯನ್ನು ಹೊಂದಲು ಸಿದ್ಧವಾದಾಗ.



# ಹುಡುಗ ಮತ್ತು ಹುಡುಗಿಯು ಕಾಯ್ದೆಯ ವಯೋಮಾನಕ್ಕಿಂತ ಮುಂಚೆ ಮದುವೆಯಾದರೆ ಆ ಮದುವೆಯು...

ಇಬ್ಬರು ಅಪ್ರಾಪ್ತ ವ್ಯಕ್ತಿಗಳ ನಡುವಿನ ವಿವಾಹವು ಪ್ರಾರಂಭದಿಂದಲೇ ಅಮಾನ್ಯ

**ಬಾಲ್ಯವಿವಾಹದಿಂದಾದ ಯಾವುದೇ ಲೈಂಗಿಕ ಕೃತ್ಯ ಮಗುವಿನ ಲೈಂಗಿಕ ದುರುಪಯೋಗ**



# ಮದುವೆಯ ವಯೋಮಾನಕ್ಕೆ ಮುಂಚೆ ಹುಡುಗ ಮತ್ತು ಹುಡುಗಿಗೆ ಮದುವೆ ಮಾಡಿದರೆ ಯಾರ ವಿರುದ್ಧ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಬಹುದು?

- ➤ ಹುಡುಗಿ
- ➤ ಹುಡುಗ (ಮದುವೆಯಾಗಲು ಅರ್ಹ ವಯಸ್ಸಿಗಿಂತ ಹೆಚ್ಚಿದ್ದರೆ) ✔
- ➤ ಪೋಷಕರು ✔
- ➤ ಮದುವೆಯಲ್ಲಿ ಭಾಗವಹಿಸಿದ್ದವರು ✔
- ➤ ಮದುವೆ ಮಾಡಿಸಿದ ಪುರೋಹಿತರು ✔




# ಸಮರ್ಪಿಸುವುದು

# ಸಮರ್ಪಿಸುವುದು

# ದೇವದಾಸಿಯಾಗಿ ಸಮರ್ಪಿಸುವುದು ಕಾನೂನುಬದ್ಧವೇ?

- ವ್ಯಕ್ತಿಯನ್ನು "ದೇವದಾಸಿ" ಯನ್ನಾಗಿ ಸಮರ್ಪಿಸುವುದು ಅಪರಾಧ
- ಹುಡುಗಿ ಅಥವಾ ಮಹಿಳೆಯ ಒಪ್ಪಿಗೆ ಇಲ್ಲಿ ಗಣನೆಗೆ ಬರುವುದಿಲ್ಲ.



# ದಂಡ

ಮಹಿಳೆಯನ್ನು ದೇವದಾಸಿಯನ್ನಾಗಿ ಮಾಡುವ, ಅನುಮತಿಸುವ, ಭಾಗವಹಿಸುವ ಅಥವಾ ಆಚರಣೆಯನ್ನು ಬೆಂಬಲಿಸುವ ಯಾವುದೇ ಸಮಾರಂಭ ಅಥವಾ ಕೃತ್ಯಗಳು ಅಥವಾ ಇದಕ್ಕೆ ಸಂಬಂಧಿಸಿದ ಯಾವುದೇ ಸಮಾರಂಭ ಮತ್ತು ಕೃತ್ಯಗಳು ಅಪರಾಧ.

ಈ ರೀತಿ ಮಾಡಿದರೆ ಇದಕ್ಕೆ ಮೂರು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾಗೃಹ ವಾಸ ಮತ್ತು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡವನ್ನು ವಿಧಿಸಬಹುದು.

ದೇವದಾಸಿಯಾಗಿ ಸಮರ್ಪಿಸಿದ ಮಹಿಳೆಯ ಹೆತ್ತವರು, ಪೋಷಕರು ಅಥವಾ ಸಂಬಂಧಿಗಳು ಅಪರಾಧಿಗಳಾಗಿದ್ದರೆ ಅವರಿಗೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಶಿಕ್ಷೆ ವಿಧಿಸಬಹುದು.



# ಯಾವುದೇ ಪ್ರಶ್ನೆಗಳು?



Published By

ARZ
Anyay Rahit Zindagi

Supported By

We World